ನಾನು ಪುಟ್ಟ ಹುಡುಗನಾಗಿದ್ದಾಗ ದೇವರ ಭಯ, ಬೀದಿ ನಾಯಿ ಕಚ್ಚೀತೆಂಬ ಭಯ ಎರಡೂ ಇತ್ತು. ಈಗ ಮೊದಲನೆಯದು ಇದೆ. ಎರಡನೆಯ ಭಯವಿಲ್ಲ. ಕಾರಣ ನನ್ನ ಮುದ್ದು ಮಕ್ಕಳ ಒತ್ತಾಸೆಯಂತೆ ಎರಡು ನಾಯಿಗಳನ್ನು ಮನೆಗೆ ತರುವಂತಾಗಿ ಒಂಬತ್ತು ವರ್ಷಗಳೇ ಕಳೆದು, ಅವೆರಡೂ ನನ್ನ ಕುಟುಂಬದ ಸದಸ್ಯರಾಗಿಬಿಟ್ಟಿವೆ. ನಾನು ನಿಧಾನವಾಗಿ ಅವುಗಳನ್ನು ವಾಕಿಂಗ್ ಕರೆದು ಕೊಂಡು ಹೋಗುವುದನ್ನು ಕಲಿತಿದ್ದೇನೆ. ಇದೇನು ವಿಶೇಷ ವಿದ್ಯೇನಾ.. ಎನ್ನಬೇಡಿ. ಎಷ್ಟು ಮಂದಿಯ ಬೈಗಳನ್ನು ಹೊಟ್ಟೆಗೆ ಹಾಕಿಕೊಳ್ಳಬೇಕು ಗೊತ್ತಾ? ಕೆಲವರು ಜೀವ ಹೋದವರಂತೆ ನಮ್ಮ ಜರ್ಮನ್  ಷೆಪರ್ಡ್ ನಾಯಿಯನ್ನು ನೋಡಿದಾಕ್ಷಣ  ಹೌಹಾರುತ್ತಾರೆ.

ಬೆಳಗ್ಗೆ ನೀವು ಎಷ್ಟು ಬೇಗನೆ ವಾಕಿಂಗಿಗೆ ಹೋದರೂ, ಕೈ ಚಪ್ಪಾಳೆ ತಟ್ಟಿಕೊಳ್ಳುತ್ತಾ, ಇಯರ್‌ಫೋನ್ ಕಿವಿಗೆ ತಗುಲಿಸಿಕೊಂಡು; ಬೊಜ್ಜು ಕರಗಿಸ ಲೆಂದೋ, ಹೆಂಡತಿಯ/ಗಂಡನ ಕಾಟ ತಪ್ಪಿಸಲೆಂದೋ ಬೆಂಗಳೂರಿನ ಎಲ್ಲ ವಯಸ್ಸಿನ ಹೆಂಗಸರು, ಪುರುಷರು ವಾಕಿಂಗ್ ಪ್ರಾರಂಭಿಸಿದ್ದಾರೆ. ನಾಯಿ ನೋಡಿದರೆ ಸಾಕು– 'ಸ್ವಲ್ಪ ದೂರ ಕರೆದುಕೊಂಡು ಹೋಗೀಪಾ, ನನಗೆ ಭಯ' ಎಂದು ಕೆಲವರು ಅಲವತ್ತುಕೊಂಡರೆ; 'ಏನ್ರೀ, ನೀವು ವಿದ್ಯಾವಂತರಂತೆ ಕಾಣಿಸ್ತೀರಿ? ನಾನು ಹಾಕಿದ ರಂಗೋಲಿ ಮೇಲೆ ನಿಮ್ಮ ನಾಯಿ ಧಾರಾಳವಾಗಿ ಮೂತ್ರ ಮಾಡಿದೆ. ನೀವು ಕ್ಲೀನು ಮಾಡ್ತೀರಾ?' ಎಂದು ಇನ್ನು ಕೆಲವರು ಶಪಿಸುತ್ತಾರೆ.

ಯಾರೇ ಕೂಗಾಡಲಿ, ನಾಯಿಗಳ ವಾಕಿಂಗ್ ಮಾತ್ರ  ತಪ್ಪಬಾರದು. ಇಲ್ಲದಿದ್ದರೆ ಅದು ತನ್ನ ಕೆಲಸವನ್ನು ಮನೆಯ ಓಣಿಯಲ್ಲೇ ಮಾಡಿಬಿಡುತ್ತದೆ. ಈ ಭಯದಿಂದಾದರೂ, ಛಳಿ, ಮಳೆ, ಗಾಳಿ ಎನ್ನದೆ ಮೊದಲು ನಾನು, ಈಗ ನನ್ನ ಮಗ ವಾಕಿಂಗ್ ಕರೆದೊಯ್ಯುವ ಕೆಲಸ ಮಾಡದೆ ವಿಧಿಯಿಲ್ಲ. ನಮ್ಮ ಮನೆಯ ಹತ್ತಿರ ಯಾವ ದೊಡ್ಡ ಬಯಲೂ ಇಲ್ಲ. ಮುಖ್ಯ ರಸ್ತೆ, ಭರ್ ಎಂದು ಯದ್ವತದ್ವಾ ಚಲಿಸುವ ಕಾಲ್ ಸೆಂಟರ್ ಕ್ಯಾಬುಗಳೂ, ಲಾರಿ, ದ್ವಿ– ಚತುರ್ ಚಕ್ರ ವಾಹನಗಳೂ ಎದುರಾಗುತ್ತವೆ.

ನನ್ನ ನಾಯಿಸುತರಲ್ಲಿ ಒಂದು ಜರ್ಮನ್ ಷೆಫರ್ಡು. ಎಲ್ಲರೂ ಅದಕ್ಕೆ ಟೈಗರ್ ಎಂದು ಹೆದರುತ್ತಾರೆ. ನಾವಿಟ್ಟ ಹೆಸರು ಕುಟ್ಟಿ ಅಂತ.  ಇನ್ನೊಂದು ಲ್ಯಾಬ್ರಡಾರ್. ಅದು ಬಲು ನಿಧಾನಿ. ಅವನ ಹೆಸರಿನ ಬಗ್ಗೆ ದೀರ್ಘ ಚರ್ಚೆಯಾಗಿ ಈಗ ಗುಲ್ಲು ಎನ್ನುವ ಹೆಸರು ಇಟ್ಟಿದ್ದೇವೆ. ಅದು ತುಂಬಾ ಮೂಡಿ ಫೆಲೋ. ರಸ್ತೆ ಮಧ್ಯದಲ್ಲೇ ಹಲ್ಲಿಯಂತೆ ಕಚ್ಚಿಕೊಂಡು ಕೂರುತ್ತದೆ. ತಾವು ಚುಕ್ಕೆ ಎಣಿಸಿ, ಮನೆ ಲೆಕ್ಕ ಹಾಕಿ ಬಿಡಿಸಿದ ರಂಗೋಲಿಯ ಮೇಲೆ ನಿಧಾನವಾಗಿ ಮೂತ್ರಾಭಿಷೇಕ ಮಾಡುವುದನ್ನು ಯಾರು ಸಹಿಸುತ್ತಾರೆ ಹೇಳಿ?

ಎರಡರ ವಯಸ್ಸೂ ಒಂದೇ; ಆದರೂ ಜಾತಿ ಭೇದವಿದೆ. ಆದರೆ ಅವು ಪರಸ್ಪರ ಜಗಳವಾಡುವುದಿಲ್ಲ. ಜರ್ಮನ್ ಶೆಫರ್ಡಿಗೆ ಮಾಂಸಾಹಾರ ಬಲು ಪ್ರಿಯ. ಲ್ಯಾಬ್ರಡಾರಿಗೆ ಏನು ಹಾಕಿದರೂ ತಿನ್ನುತ್ತಾನೆ. ಆದರೆ ಶುದ್ಧ ಸಸ್ಯಾಹಾರಿ  ಬ್ರಾಹ್ಮಣನಾದ ನಾನು ಮಡಿ, ಮೈಲಿಗೆ ಮರೆತರೂ, ಮಾಂಸಾಹಾರವನ್ನು ಎಲ್ಲಿಂದ ತರಲಿ? ನಮ್ಮ ಹಾಗೆ ಅನ್ನ, ಮೊಸರು, ಹಾಲು, ಸಾರು ತಿನ್ನಲು ಅವಕ್ಕೇನು ಗ್ರಹಚಾರವೆ? 'ಮನೆಗೆ ತಂದಿದ್ದೀರಲ್ಲ ಬಡ್ಡೀಮಕ್ಳಾ .. ನಮಗೇನು ಬೇಕೋ ಹಾಕಿ' ಎಂದು ಕಣ್ಣುಗಳಲ್ಲೇ ಬೆದರಿಕೆ ಹಾಕುತ್ತವೆ.

ಆದರೆ ಅವೆರಡು ತೋರಿಸುವ ಪ್ರೀತಿ, ಊಟವಾದ ನಂತರ ಕೈ ನೆಕ್ಕುವ, ಮುದ್ದು ಮಾಡುವ ಸುಖ ಬಹುಶಃ ಮಕ್ಕಳೂ ಒಂದು ವಯಸ್ಸಾದ ಮೇಲೆ ನಿಲ್ಲಿಸುತ್ತಾರೆ. ಜರ್ಮನ್ ಷೆಫರ್ಡ್ ಬಲು ಕೃತಜ್ಞ; ಲ್ಯಾಬ್ರಡಾರ್ ತಿಥಿ ಬ್ರಾಹ್ಮಣನ ಹಾಗೆ– ಏನು ಹಾಕಿದರೂ ಉಂಡು ಕ್ಯಾರೇ ಎನ್ನುವುದಿಲ್ಲ. ಮನೆಯ ಗೇಟನ್ನು ಯಾರೂ ಮುಟ್ಟುವಂತಿಲ್ಲ. ಬೊಗಳಿ ದೂರ ಅಟ್ಟುವುದು ಜರ್ಮನ್ ನಾಯಿ. ಲ್ಯಾಬ್ರಡಾರ್ ಎಲ್ಲರಿಗೂ ಬಾಲ ಅಲ್ಲಾಡಿಸುತ್ತದೆ. ಅವನು ಬಲು ಜಾಣನಾದರೂ, ಬುದ್ಧಿಯನ್ನು ಬಾಳೆಹಣ್ಣು ಕದಿಯಲು ಮಾತ್ರ ಬಳಸಿ, ಎಲ್ಲೋ ಗುಟ್ಟಾಗಿ ಮೂತ್ರ ಮಾಡಿ ಮೂಲೆಯಲ್ಲಿ ಅಡಗಿಬಿಡುತ್ತಾನೆ. ಅವನು ಮನೆಯಲ್ಲಿ ಕಾಣುತ್ತಿಲ್ಲ ಎಂದರೆ ಏನೋ ಕೆಟ್ಟ ಕೆಲಸ ಮಾಡಿದ್ದಾನೆ ಎಂದೇ ಅರ್ಥ! 'ಸ್ಪಾಯಿಲ್ಟ್ ಬ್ರಾಟ್' ಎನ್ನುತ್ತಾರಲ್ಲ–  ಶ್ರೀಮಂತರ ಮನೆಯ ದಾರಿಗೆಟ್ಟ  ಹುಡುಗರಿಗೆ, ಹಾಗೆ ಅವನ ರೀತಿ ರಿವಾಜು.

ನಾನು ಕಂಪ್ಯೂಟರಿನ ಮುಂದೆ ಕೂತರೆ ಜರ್ಮನ್ ಷಫರ್ಡ್ ನನ್ನ ಪಾದಗಳ ಬಳಿ ನೆಮ್ಮದಿಯಿಂದ ಮಲಗುತ್ತಾನೆ. ಇನ್ನೊಬ್ಬ ಆಸಾಮಿ ಗುಲ್ಲು ಮಹಾಶಯ ಆಸೆಬುರುಕ. ಹೊಟ್ಟೆಗೆ ಬಿದ್ದ ಕೂಡಲೇ ಕೈಗೆ ಸಿಗದೆ ದಿನಕ್ಕೆ ಏನಿಲ್ಲವೆಂದರೂ 18 ಗಂಟೆ ಸಮಯ ಗೊರಕೆ ನಿದ್ದೆ ಮಾಡುತ್ತಾನೆ. ಅವನ ಪ್ರೀತಿ ಪ್ರದರ್ಶನ ಊಟಕ್ಕೆ ಸ್ವಲ್ಪ ಮೊದಲು ಅಷ್ಟೆ. ರಾಜಕಾರಣಿಯಂತೆ ನಂತರ ನಾಪತ್ತೆ.

ಒಮ್ಮೆ ಹೀಗಾಯಿತು. ನಾನು, ಮಕ್ಕಳು ಕಾಲೇಜಿಗೆ ಹೋಗಿದ್ದೆವು. ಮನೆಯೊಳಗೆ ಇಬ್ಬರೂ ಮಲಗಿದ್ದರು. ಸಂಜೆ ವಾಪಸು ಬಂದು ನೋಡುತ್ತೇನೆ. ಅಯೊಡೆಕ್ಸ್ ಬಾಟಲಿ ಖಾಲಿ! ನನಗೆ ಡಾಕ್ಟ್ರು ಕೊಟ್ಟಿದ್ದ ಮಾತ್ರೆಗಳೂ ನಾಪತ್ತೆ! ಮೇಲೆ ಒಬ್ಬ ಹತ್ತಿ ಇನ್ನೊಬ್ಬನಿಗೆ ಸಹಾಯ ಮಾಡಿ ಮಾಡಿದ ಪರಾಕ್ರಮದ ಕೆಲಸವಿದು. ಬಾಗಿಲು ತೆರೆದು ನೋಡುತ್ತೇನೆ. ಇಬ್ಬರೂ ಹುಚ್ಚುಚ್ಚಾಗಿ ಆಡುತ್ತಿದ್ದಾರೆ. ಗೋಡಿಗೆ ಮೈ ತಿಕ್ಕಿ ಪಲ್ಟಿ ಹೊಡೆಯುತ್ತಿದ್ದಾರೆ. ಲ್ಯಾಬ್ರಡಾರನಂತೂ ಗಾಢ ನಿದ್ದೆಯಲ್ಲಿದ್ದಾನೆ.

ಡಾಕ್ಟರಿಗೆ ಫೋನು ಮಾಡಿದರೆ ಸೆವೆನಪ್ ಕುಡಿಸಿ, ಮತ್ತು ಇಳಿಯುತ್ತದೆ ಎಂದರು! ಹಾಗೆಯೇ ಮಾಡಿದೆ. ಇಬ್ಬರೂ ಮಲಗಿ ಮೂರು ತಾಸು ನಿದ್ದೆ ತೆಗೆದು ಮತ್ತೆ ಬಾಲ ಅಲ್ಲಾಡಿಸುವವರೆಗೂ ನಮಗೆ ನೆಮ್ಮದಿ ಇರಲಿಲ್ಲ. ಮತ್ತೆ ಎಂದೂ ಯಾವ ವಸ್ತುವನ್ನೂ ಅವರಿಬ್ಬರ ಕೈಗೆಟುಕುವ ಜಾಗದಲ್ಲಿ ಇಡುವ ತಪ್ಪನ್ನು ಮಾಡಿಲ್ಲ. ಮನೆಯಲ್ಲಿ ಕಳೆದ ವಸ್ತುಗಳೆಲ್ಲಾ ಮಂಚದಡಿಯಲ್ಲಿ ಈ ರೆಟ್ರೀವರ್ ನಾಯಿ ಸಂಗ್ರಹಾಲಯ ಮಾಡಿತ್ತು. ಹರಿದ ಪೇಪರ್, ಕವರುಗಳು, ಹೇರ್ ಬ್ಯಾಂಡು ಹೀಗೆ... ಅಲ್ಲಿ ಹುಡುಕಿದರೆ ಗ್ಯಾರಂಟಿ ದೊರೆಯುತ್ತಿತ್ತು.

ನಮ್ಮ ಜರ್ಮನ್ ಪುತ್ರನಿಗೆ ನ್ಯೂಸ್ ಪೇಪರಿನವನೆಂದರೆ ಬಲು ಸಿಟ್ಟು. ಅವನು ಬೈಕಿನಲ್ಲಿ ಬಂದ ಎಂದರೆ ಮಲಗಿದ್ದರೂ ದುಡುದುಡು ಕೆಳಗೆ ನುಗ್ಗಿ, ಬಾಲ ನೆಟ್ಟಗೆ ಮಾಡಿಕೊಂಡು ಯುದ್ಧಕ್ಕೆ ನಿಲ್ಲುತ್ತಾನೆ. ಅವನಿಗೆ ಹೇಳಿ ಹೇಳಿ ಸಾಕಾಯ್ತು. ಪೇಪರನ್ನು ಸುರುಳೀ ಮಾಡಿ ಅದನ್ನು ಎಸೆಯುವುದು ಇವನಿಗೆ ಸಿಟ್ಟು ತರಿಸುತ್ತದೆ. ಸುಮ್ಮನೆ ಗೇಟಿನ ಹತ್ತಿರ ಇಟ್ಟು ಹೋಗಪ್ಪಾ ಎಂದರೆ ಅದನ್ನು ಮರೆಯುತ್ತಾನವನು.

ನನ್ನ ಮನೆಗೆ ಮಡಿವಂತ ಬಂಧುಗಳು ಬರುವುದನ್ನು ನಿಲ್ಲಿಸಿದ್ದಾರೆ. ನಾಯಿ ಮುಟ್ಟಿದರೆ ಜನಿವಾರ ಬದಲಿಸಬೇಕಲ್ಲ!  ಆದರೆ ಹೀನ ಸ್ವಭಾವದ ಜನರನ್ನು ಅವರು ಗೌರವಿಸುವುದು, ಅವರ ಕಾಲಿಗೆ ದೀರ್ಘ ದಂಡ ಪ್ರಣಾಮ ಮಾಡು ವುದನ್ನು ತಪ್ಪದೆ ಮಾಡುತ್ತಾರೆ. ತುಸು ದ್ವಂದ್ವಾರ್ಥ ಬರುವ ಹಾಗೆ ಮಾತಾ ಡುವ ಪುರೋಹಿತರು, ಪಂಡಿತರ ಕಾಲಿಗೆ ಅವರು ದಬಕ್ಕನೆ ಬೀಳುತ್ತಾರೆ. ನಾಯಿ ಕಂಡರೆ ಕೆಟ್ಟ ಮುಖ ಮಾಡಿ, 'ಕಟ್ಟಿ ಹಾಕಿದ್ದೀರಾ? ಒಳಗೆ ಬರ ಬಹುದೇ..' ಎಂದು ಖಾತರಿ ಮಾಡಿಕೊಂಡು ಬಂದು, ಅವರು ಕೊಡಬೇಕಾದ ಲಗ್ನ ಪತ್ರಿಕೆಯನ್ನೋ ಮತ್ತೇನನ್ನೋ ಕೊಟ್ಟು, ಕಾಫಿಯನ್ನೂ ಕುಡಿಯದೆ ಹಾಗೆಯೇ  ಹೊರಡುತ್ತಾರೆ. ಹೀಗಾಗಿ  ನಾಯಿ ತಂದಾಗಿನಿಂದ ನಮ್ಮ ಮನೆಗೆ ಬಂದುಹೋಗುವ ಮಂದಿ ಬಲು ಕಡಿಮೆ. ಖರ್ಚೂ ಕಡಿಮೆ ಆಯಿತೇನೋ!

ಈಗ ಅವರಿಬ್ಬರೂ  ಸ್ವಲ್ಪ ಪ್ರೌಢರಾಗಿದ್ದಾರೆ, ಮೊದಲಿನ ಹಾಗೆ, ಚೇಷ್ಟೆ ಮಾಡದಿದ್ದರೂ, ಸರ್ವಾಹಾರಿ ಲ್ಯಾಬ್ರಡಾರ್ ದೇವರ ಮುಂದಿಟ್ಟ ಬಾಳೆ ಹಣ್ಣನ್ನು ಹಾಗೆಯೇ ಮರೆತರೆ ಲಪಟಾಯಿಸುವುದು ಗ್ಯಾರಂಟಿ. ಗೇಟಿನ ಮುಂದೆ ತುಸು ಬಾಗಿ ನಿಲ್ಲುವ ಜನ ಈಗ ಹಾಗೆ ಮಾಡುವ ತಪ್ಪು ಮಾಡುವುದೇ ಇಲ್ಲ. ತಮಿಳು ನೆರೆಯವರಿಗೆ ವೆಳ್ಳಕ್ಕಾರಿ ಎಂದರೆ ನಮ್ಮ ಲ್ಯಾಬ್ ಬಲು ಪ್ರೀತಿ. ಆದರೆ ಕರುಪ್ಪು ನಾಯ್ ನೋಡಿದರೆ ಓಡುತ್ತಾರೆ. ಸ್ಕೂಲು ಮಕ್ಕಳು ಅದರ ಹೆಸರನ್ನು ಕೇಳಿ ಖಚಿತ ಮಾಡಿಕೊಂಡು ಆಗಾಗ ಕರೆಯುತ್ತಿರುತ್ತಾರೆ. ತಮ್ಮ ತಾಯಂದಿರಿಗೂ ಇಂಥದೇ ನಾಯಿ ತಾ ಎಂದು ಪೀಡಿಸಿದರೆ, ಅವರು ಆ ಕಂದಗಳನ್ನು ದರದರ ಎಳೆದುಕೊಂಡು 'ನೀನಿದ್ದೀಯಲ್ಲ? ಇನ್ಯಾಕೆ ನಾಯಿ?' ಎಂದು ಗದರಿಸುತ್ತಾರೆ. ಅವರು ಆಸೆ ಕಂಗಳಿಂದ ಇಬ್ಬರನ್ನೂ ನೋಡಿಕೊಂಡು ಕಾಲೆದುಕೊಂಡು ಸಾಗುತ್ತಾರೆ.

ಆದರೆ ಈಗ ವಯೋಧರ್ಮದ ಕಾಯಿಲೆಗಳು ದಾಳಿ ಮಾಡಿ, ಅವರಿಬ್ಬರನ್ನೂ ಆಗಾಗ ಹೆಬ್ಬಾಳಕ್ಕೆ ಕರೆದೊಯ್ಯುವಂತಾಗುತ್ತದೆ. ಎಲ್ಲಿಯೂ ನಾವು ಮೂವರೂ ಪ್ರವಾಸ ಹೊರಡುವುದನ್ನು ಮರೆತೇ ಬಿಟ್ಟಿದ್ದೇವೆ. ಆದರೆ ಆ ಎರಡು ಶ್ವಾನ ಪುತ್ರರ ನಿರ್ವ್ಯಾಜ್ಯ ಸ್ನೇಹವನ್ನು ಯಾವ ಗೆಳೆಯನೂ ಕೊಡಲಾರ ಎಂದು ನನಗೆ ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದಾಗ, ಅವರು ತೋರಿಸಿದ ಪ್ರೀತಿಯನ್ನು ನೋಡಿ, ಖಚಿತವಾಯಿತು.

ವೇದದಲ್ಲಿ ಸುರಮಾ ಎನ್ನುವ ನಾಯಿಯ  ಪ್ರಸ್ತಾಪ, ಹೊಗಳಿಕೆಯನ್ನು ಓದಿದ್ದೇನೆ. ಆದರೆ ನಮ್ಮ ಜನರು ನಾಯಿಯನ್ನು ದೂರವಿಟ್ಟು, ನಾಯಿಬುದ್ಧಿಯ ಜನರನ್ನು ನಂಬುತ್ತಾರಲ್ಲ ಎನ್ನುವುದೇ ಸಖೇದಾಶ್ಚರ್ಯದ ಸಂಗತಿ.